**FDP - 1/2016** ಪಿ.ಡಬ್ಲ್ಯೂ.**:-1**

ದಿನಾಂಕಃ **06-11-2023** ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು :- ಎದುರುದಾರರ **4** ಮತ್ತು **7** ರ ಪರ ವಕೀಲರಿಂದ :-

ನಾನು 10 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ಬಸ್ಸಿನ ಚಾಲಕನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ನಾನು ಉಡುಪಿಯಲ್ಲಿ ಕೇವಲ ಕೆಲಸ ಮಾಡುತ್ತಿದ್ದೇನೆ. ನಾನು ಮೂಲತಃ ದೇವರಹೊನ್ನಾಳಿ ಗ್ರಾಮದ ವಾಸಿ. ನಾನು ಮದುವೆಯಾಗಿ ಉಡುಪಿಯಲ್ಲಿ ಇದ್ದೇನೆ. ಈಗ ನನ್ನ ಹೆಂಡತಿ ಹೆರಿಗೆಯ ಸಂಬಂಧವಾಗಿ ಉಡುಪಿಯಲ್ಲಿ ತನ್ನ ತವರು ಮನೆಯಲ್ಲಿ ಇದ್ದಾರೆ. ಅರ್ಜಿಯ ಆಸ್ತಿಯನ್ನು 6 ನೇ ಎದುರುದಾರರ ಗಂಡ ವ್ಯವಸಾಯ ಮಾಡುತ್ತಿದ್ದಾರೆ. ಸಾಕ್ಷಿ ಮುಂದುವರೆದು ಈ ಮೊದಲು ನನ್ನ ಅಣ್ಣ ಮಹೇಶಪ್ಪ ರವರು ಸಾಗುವಳಿ ಮಾಡುತ್ತಿದ್ದರು ಅವರು ತೀರಿಕೊಂಡ ನಂತರ ನನಗೆ ಅರ್ಜಿಯ ಆಸ್ತಿಯಲ್ಲಿ ಸಾಗುವಳಿ ಮಾಡಲು ಸಾಧ್ಯವಾಗದ ಕಾರಣ 6 ನೇ ಎದುರುದಾರರ ಗಂಡ ಸಾಗುವಳಿ ಮಾಡುತ್ತಿದ್ದಾರೆ ಎಂದು ನುಡಿಯುತ್ತಾರೆ. ನನ್ನ ಅಣ್ಣ ಮಹೇಶಪ್ಪ ತೀರಿಕೊಂಡು ಸುಮಾರು 12-13 ವರ್ಷಗಳಾಗಿರುತ್ತದೆ. ನನ್ನ ತಾಯಿ ಮರಣ ಹೊಂದುವತನಕ್ಕ ನನ್ನ ಜೊತೆಯಲ್ಲಿ ವಾಸವಾಗಿದ್ದರು. ಆ ಸಮಯದಲ್ಲಿ ನಾನು ದೇವರಹೊನ್ನಾಳಿ ಗ್ರಾಮದಲ್ಲಿ ವಾಸವಾಗಿದ್ದೇನು. ನಾನು ದುರ್ಗಾಂಬಾ ಬಸ್ಸಿನಲ್ಲಿ ಚಾಲಕನಾಗಿ ಸುಮಾರು 12 ವರ್ಷಗಳಿಂದ ಮಾಡುತ್ತಿದ್ದೇನೆ ಆ ಸಮಯದಲ್ಲಿ ನನಗೆ ಕೆಲಸ ಇಲ್ಲದ ವೇಳೆಯಲ್ಲಿ ರೂಂ ನಲ್ಲಿ ವಾಸವಾಗಿರುತ್ತಿದ್ದೇನು. ಆ ಸಮಯದಲ್ಲಿ ನನಗೆ ಸೇರಿದ ಮನೆಯಲ್ಲಿ ನನ್ನ ತಾಯಿ ಒಬ್ಬರೇ ವಾಸವಾಗಿದ್ದರು. ಅರ್ಜಿಯ ಆಸ್ತಿಯನ್ನು ಅಳತೆ ಮಾಡಲು ಸರ್ವೆ ಇಲಾಖೆಯವರು ಅಳತೆ ಮಾಡುವ ಪೂರ್ವದಲ್ಲಿ ತಿಳುವಳಿಕೆ ಪತ್ರ ನೀಡಿದ್ದರು ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲನ್ನು ಕೋರಿಕೆಯ ಮೇರೆಗೆ ಮುಂದೂಡಲಾಯಿತು.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
**ಜೆ.ಎಂ.ಎಫ್.ಸಿ., ಹೊನ್ನಾಳಿ.**